# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7608/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 30/01/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಆರ್.ಶೇಖರಪ್ಪ, ಜಿಲ್ಲಾ ವ್ಯವಸ್ಥಾಪಕರು (ಹಾಲಿ ನಿವೃತ್ತ), ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು, (2) ಶ್ರೀ.ಹೆಚ್.ವಿ.ದಾಮೋದರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಮತ್ತು (3) ಶ್ರೀ.ಚಂದ್ರಾನಾಯ್ಕ ಬಿನ್ ಸಾಮ್ಯಾನಾಯ್ಕ, ಬೋಳನಹಳ್ಳಿ ತಾಂಡ್ಯ, ದೇವನೂರು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1). ಶ್ರೀ.ಶಂಕರನಾಯ್ಕ ಬಿನ್ ಸೋಮ್ಲಾನಾಯ್ಕ, ಬೋಳನಹಳ್ಳಿ ತಾಂಡ್ಯ, ದೇವನೂರು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ಆರ್.ಶೇಖರಪ್ಪ, ಜಿಲ್ಲಾ ವ್ಯವಸ್ಥಾಪಕರು (ಹಾಲಿ ನಿವೃತ್ತ), ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು. ಮತ್ತು (2) ಶ್ರೀ.ಹೆಚ್.ವಿ.ದಾಮೋದರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ. ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಮತ್ತು (3) ಶ್ರೀ.ಚಂದ್ರಾನಾಯ್ಕ ಬಿನ್ ಸಾಮ್ಯಾನಾಯ್ಕ, ಬೋಳನಹಳ್ಳಿ ತಾಂಡ್ಯ, ದೇವನೂರು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಖಾಸಗಿ ವ್ಯಕ್ತಿ) (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ದೇವನೂರು ಗ್ರಾಮದ ಸ.ನಂ.71 ರಲ್ಲಿ ದೂರುದಾರರ ತಂದೆಗೆ 1 ಎಕರೆ 39 ಗುಂಟೆ ಜಮೀನಿದ್ದು, ಚಂದ್ರಾನಾಯಕ್ ಎಂಬುವರು ದಾಖಲಾತಿಗಳನ್ನು ಬೋಗಸ್ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದಿಂದ ಕೊಡುವ ಗಂಗಾ ಕಲ್ಯಾಣ ಕೊಳವೆ ಬಾವಿಯನ್ನು ದೂರುದಾರರ ತಂದೆಯ ಹೆಸರಿನಲ್ಲಿ ಚಂದ್ರಾನಾಯಕ್‌ರವರ ಜಮೀನಿನಲ್ಲಿ ಕೊರೆಯಿಸಿಕೊಂಡು ಅದಕ್ಕೆ ಸಂಬಂಧಿಸಿದ ಸಬ್‌ಮರ್ಸಿಬಲ್ ಪಂಪ್, ಮೋಟಾರ್, ಪೈಪ್, ಕೇಬಲ್ ಮುಂತಾದ ಪರಿಕರಗಳನ್ನು ಪಡೆದುಕೊಂಡಿರುತ್ತಾರೆ. ತಾಲ್ಲೂಕು ಸಮಾಜ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳಾದ

ಶ್ರೀ.ದಾಮೋದರ್‌ರವರು ಸದರಿ ಸ.ನಂ.71 ರ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮೆಸ್ಕಾಂಗೆ ಶಿಫಾರಸ್ಸು ಮಾಡಿರುವ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ. ದಿ.18/7/14 ರಂದು ತಾಲ್ಲೂಕು ಸಮಾಜ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ದಾಮೋದರ್‌ರವರಿಗೆ ಲಿಖಿತ ದೂರು ಕೊಟ್ಟಿದ್ದರೂ ಸಹ ಅವರು ಅದನ್ನು ಮರೆಮಾಚುವ ಪ್ರಯತ್ನ ಮಾಡುತ್ತಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ವರದಿ ನೀಡುವಂತೆ ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು ಜಿಲ್ಲೆ, ಇವರಿಗೆ ಆದೇಶಿಸಲಾಗಿತ್ತು. ಜಿಲ್ಲಾ ವ್ಯವಸ್ಥಾಪಕರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ನಿಗಮದಿಂದ ಶ್ರೀ.ಸೋಮ್ಲಾನಾಯಕ್ ಬಿನ್ ಪೀರ್ಯಾನಾಯ್ಕ, ಬೋಳನಹಳ್ಳಿ, ಸ.ನಂ.71 ವಿಸ್ತೀರ್ಣ 1.34 ರಲ್ಲಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆದಿರುವುದಿಲ್ಲ. ಆದರೆ, ಶ್ರೀ.ಚಂದ್ರಾನಾಯ್ಕ ಬಿನ್ ಸಾಮ್ಯಾನಾಯ್ಕ, ಬೋಳನಹಳ್ಳಿ ತಾಂಡ ಇವರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ನೀಡುವಾಗ ಶ್ರೀ.ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಪಹಣಿಯನ್ನು ನೀಡಿರುತ್ತಾರೆ. ಅದನ್ನು ಪರಿಶೀಲಿಸದೆ ವಿದ್ಯುತ್ ಸಂಪರ್ಕಕ್ಕೆ ಶಿಫಾರಸ್ಸು ಮಾಡುವಾಗ ಶ್ರೀ.ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕ, ಸ.ನಂ.71 ರಲ್ಲಿ ಕೊಳವೆ ಬಾವಿ ಕೊರೆದಿರುವುದಾಗಿ ದೃಢೀಕರಣ ನೀಡಲಾಗಿರುತ್ತದೆ. ನಂತರ ಚಂದ್ರಾನಾಯ್ಕ ಇವರಿಂದ ಲಿಖಿತ ಮನವಿ ಪಡೆದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಕಡೂರು ಇವರಿಗೆ ಪತ್ರ ಬರೆದು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕೋರಿರುತ್ತಾರೆಂದು ಹೇಳಿರುತ್ತಾರೆ.

4) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ದಿ.31/3/15 ರಲ್ಲಿ ನಿವೃತ್ತಿ ಹೊಂದಿದ್ದು, ಏಪ್ರಿಲ್ 2015 ರಲ್ಲಿ ಅವರಿಗೆ ಹೃದಯಾಘಾತವಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯದ ಬಗ್ಗೆ ಜ್ಞಾಪಕವಿರುವುದಿಲ್ಲವಾದ ಕಾರಣ ವಿಷಯ ತಿಳಿಸಲು ಸಾಧ್ಯವಾಗಿರುವುದಿಲ್ಲ. ನಿಗಮದ ಯೋಜನೆಗಳನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸುವವರು ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಾಗಿರುವುದರಿಂದ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಾದ ದಾಮೋದರ್‌ರವರು ಮಾಹಿತಿ ಕಳುಹಿಸಿ ಕೊಟ್ಟಿರುವುದಾಗಿ ತಿಳಿಸಿರುತ್ತಾರೆಂದು ಹೇಳಿರುತ್ತಾರೆ.

5) 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಪಿ.ಶಂಕರ್‌ನಾಯ್ಕರವರು ನಿಗಮಕ್ಕೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಅವರಿಗೆ ಸೌಲಭ್ಯ ಒದಗಿಸಲು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರುವುದಿಲ್ಲ. ಕೇವಲ ಶ್ರೀ.ಚಂದ್ರಾನಾಯ್ಕ ಇವರು ಕೆ.ಇ.ಬಿ.ಗೆ ನೋಂದಣಿ ಸಂದರ್ಭದಲ್ಲಿ ಸೋಮ್ಲಾನಾಯ್ಕ ಇವರ ದಾಖಲೆಗಳನ್ನು ನೀಡಿದ್ದು, ಆ ಬಗ್ಗೆ ಶಂಕರನಾಯ್ಕರವರು ಅವರ ಬಳಿ ಹೋದಾಗ ವಿಷಯ ತಿಳಿದು ಕೆ.ಇ.ಬಿ. ಸಹಾಯಕ ಅಭಿಯಂತರರಿಗೆ ಪತ್ರ ಬರೆದು ಅವರಿಗೆ ನಿಗಮದಿಂದ ಕೊಳವೆ ಬಾವಿ ಕೊರೆದಿಲ್ಲವೆಂದು ತಿಳಿಸಿ ರದ್ದುಪಡಿಸಲು ಮನವಿ ಮಾಡಲಾಗಿದ್ದು, ಅದರಂತೆ ರದ್ದುಪಡಿಸಿರುತ್ತಾರೆಂದು ಹೇಳಿರುತ್ತಾರೆ.

6) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ 2ನೇ ಎದುರುದಾರರು ಕಣ್ತಪ್ಪಿನಿಂದ ಪ್ರಮಾದವಾಗಿರುತ್ತದೆ ಎಂದು ಹೇಳಿದ್ದು, ಆದರೆ ಕೆ.ಇ.ಬಿ.

ವಿದ್ಯುತ್ ಸಂಪರ್ಕಕ್ಕೆ ಸೋಮ್ಲಾನಾಯಕ್‌ರವರ ಪಹಣಿಯನ್ನು ದಿ.9/4/12 ರಲ್ಲಿ ಪಡೆದಿರುತ್ತಾರೆ. ಡ್ರಿಲ್ಲಿಂಗ್ ರಿಪೋರ್ಟ್ ಇಲ್ಲದೆ ಕೆ.ಇ.ಬಿ.ಯಿಂದ 5 ಕಂಬಗಳ ಮಂಜೂರಾತಿ ಕೊಳವೆ ಬಾವಿಗಾಗಿ ಹೇಗೆ ಸಾಧ್ಯವಾಯಿತು. ಪವರ್ ಸಪ್ಲೈ ಅಗ್ರಿಮೆಂಟ್‌ನಲ್ಲಿ ಕೂಡ ಹೆಬ್ಬೆಟ್ಟಿನ ಸಹಿ ಹಾಕಿ ಸೋಮ್ಲನಾಯಕ್ ಎಂದು ಬರೆದಿರುವುದು ಕಣ್ತಪ್ಪಿನಿಂದ ಆಗಿರುವ ಪ್ರಮಾದವೇ? 2012-13ನೇ ಸಾಲಿನಲ್ಲಿ ಚಂದ್ರಾನಾಯ್ಕ ರವರ ತಂದೆ ಸಾಮ್ಯಾನಾಯ್ಕ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 2 ಕೊಳವೆ ಬಾವಿಗಳನ್ನು ಒಂದೇ ಸಾಲಿನಲ್ಲಿ ಕೊರೆಯಿಸಿಕೊಂಡಿರುವುದು ಹೇಗೆ ಸಾಧ್ಯವಾಯಿತು. ಡ್ರಿಲ್ಲಿಂಗ್ ರಿಪೋರ್ಟ್, ವೈರಿಂಗ್ ಗುತ್ತಿಗೆದಾರರ ಮುಕ್ತಾಯ ಮತ್ತು ಸಮಾಪನಾ ಪರೀಕ್ಷಾ ವರದಿ, ಪವರ್ ಸಪ್ಲೈ ಅಗ್ರಿಮೆಂಟ್ ಹಾಗೂ ಜಿಲ್ಲಾ ವ್ಯವಸ್ಥಾಪಕರಿಂದ ಪಂಪ್‌ಸೆಟ್, ಮೋಟಾರ್ ಪೈಪ್ ವಿತರಿಸುವ ಸಂದರ್ಭಗಳಲ್ಲಿ ಹೆಬ್ಬೆಟ್ಟಿನ ಸಹಿ ಹಾಕಿ ಸೋಮ್ಲಾನಾಯಕ್ ಎಂದು ಬರೆದಿರುವುದು ಕಣ್ತಪ್ಪಿನಿಂದ ಆಗಿರಲು ಸಾಧ್ಯವೇ. ಆದ್ದರಿಂದ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

7) ದೂರುದಾರರು ತನ್ನ ಪ್ರತ್ಯುತ್ತರದ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ತಯಾರಿಸಿದ ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ, ಅದನ್ನು ಸೋಮ್ಲಾನಾಯಕ್ ರವರ ಹೆಸರಿನಲ್ಲಿ ಮಾಡಿರುವುದು ಕಂಡುಬರುತ್ತದೆ. ಅದೇರೀತಿ ವರದಿಯಲ್ಲಿ ಕೂಡ ಸೋಮ್ಲಾನಾಯಕ್ ರವರಿಗೆ 5 ಹೆಚ್.ಪಿ.ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಸರಬರಾಜು ಮಾಡಲು ಅಂದಾಜು ಪಟ್ಟಿಯಲ್ಲಿ ನಮೂದಿಸಿರುವುದು ಕಂಡುಬರುತ್ತದೆ. ಮಂಜೂರಾತಿ ಪತ್ರವನ್ನು ಕೂಡ ಸೋಮ್ಲಾನಾಯಕ್ ರವರ ಹೆಸರಿನಲ್ಲಿ ನೀಡಿರುವುದು ಕಂಡುಬರುತ್ತದೆ. ವೈರಿಂಗ್ ಗುತ್ತಿಗೆದಾರರ ಮುಕ್ತಾಯ ಮತ್ತು ಪರೀಕ್ಷಾ ವರದಿಯಲ್ಲಿ ಸೋಮ್ಲಾನಾಯಕ್‌ರವರ ವಿಳಾಸದ ಮೇಲೆ ಹೆಬ್ಬೆಟ್ಟಿನ ಗುರುತನ್ನು ಹಾಕಿ ಸದರಿ ಹೆಬ್ಬೆಟ್ಟಿನ ಗುರುತು ಸೋಮ್ಲಾನಾಯಕ್ ರವರ ಹೆಬ್ಬೆಟ್ಟಿನ ಗುರುತೆಂದು ಬರೆದಿರುವುದು ಕಂಡುಬರುತ್ತದೆ. ಅದೇರೀತಿ ಕರಾರು ಪತ್ರವನ್ನು ಸೋಮ್ಲಾನಾಯಕ್‌ರವರ ಹೆಸರಿನಲ್ಲಿ ಮಾಡಿಕೊಂಡಿದ್ದು, ಸದರಿ ಕರಾರು ಪತ್ರದಲ್ಲಿ ಮಾಡಲಾಗಿರುವ ಹೆಬ್ಬೆಟ್ಟಿನ ಗುರುತಿನ ಪಕ್ಕದಲ್ಲಿ ಸೋಮ್ಲಾನಾಯಕ ಎಂದು ಬರೆದಿರುವುದು ಕಂಡುಬರುತ್ತದೆ. ಕೊಳವೆ ಬಾವಿಗೆ ಸಲ್ಲಿಸಿದ ಅರ್ಜಿಯಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಎಸ್.ವಿ.ದಾಮೋದರ್‌ರವರು ಸೋಮ್ಲಾನಾಯಕ್‌ರವರ ಸ.ನಂ.71/7 ರಲ್ಲಿ ಕೊಳವೆ ಬಾವಿಯನ್ನು ಕೊರೆಸಲಾಗಿದೆಯೆಂದು ದೃಢೀಕರಣ ಪತ್ರವನ್ನು ಕೂಡ ನೀಡಿರುವುದು ಕಂಡುಬರುತ್ತದೆ.

8) ಮೇಲಿನ ಅಂಶಗಳನ್ನು ಗಮನಿಸಿದಾಗ, ಸೋಮ್ಲಾನಾಯಕ್‌ರವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಲು ನಡವಳಿ ನಡೆದಿರುವುದು ಮತ್ತು ಆ ಬಗ್ಗೆ 2ನೇ ಎದುರುದಾರರು ದೃಢೀಕರಣವನ್ನು ಕೂಡ ನೀಡಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ಕಣ್ತಪ್ಪಿನಿಂದ ಪ್ರಮಾದವಾಗಿರುತ್ತದೆಯೆಂದು ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿಲ್ಲ. ದೂರುದಾರರ ದೂರಿನ ಆಧಾರದಲ್ಲಿ 3ನೇ ಎದುರುದಾರರ ವಿರುದ್ಧ ಯಾವುದೇ ಕಾನೂನು ಕ್ರಮವನ್ನು 1 ಮತ್ತು 2ನೇ ಎದುರುದಾರರು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ದೂರುದಾರರ ತಂದೆಯ ಜಮೀನಿನ ದಾಖಲಾತಿಗಳ ಆಧಾರದಲ್ಲಿ ದೂರುದಾರರ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಸಲು ನಡವಳಿ

ಮಾಡಿಕೊಂಡು ಕೊಳವೆ ಬಾವಿಯನ್ನು ಚಂದ್ರಾನಾಯ್ಕ ಎಂಬುವರ ಜಮೀನಿನಲ್ಲಿ ಕೊರೆಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 3ನೇ ಎದುರುದಾರರು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿರುವುದು ಮತ್ತು ದೂರುದಾರರ ತಂದೆಯ ಹೆಸರಿನಲ್ಲಿ 3ನೇ ಎದುರುದಾರರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿರುವ ಬಗ್ಗೆ ಎದುರುದಾರರಿಗೆ ತಿಳುವಳಿಕೆ ಇದ್ದರೂ ಸಹ ಅವರು ಕರ್ತವ್ಯಲೋಪ ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬರುತ್ತದೆ.

9) 3ನೇ ಎದುರುದಾರರು ಖಾಸಗಿ ವ್ಯಕ್ತಿಯಾಗಿದ್ದು, ಅವರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿಯಲ್ಲಿ ಅವಕಾಶವಿಲ್ಲ. ಆದರೆ, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮದವರು 3ನೇ ಎದುರುದಾರರ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಮತ್ತು ದುರುಪಯೋಗವಾದ ಹಣವನ್ನು ವಸೂಲಿ ಮಾಡಲು ಅವಕಾಶವಿದೆ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ. 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ 3ನೇ ಎದುರುದಾರರ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಮತ್ತು ದುರುಪಯೋಗವಾದ ಹಣವನ್ನು ವಸೂಲಿ ಮಾಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

30.1.17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.